ಪಕ್ಕದ ಕಾಫಿ ಅಂಗಡಿಯಲ್ಲಿ ಗುಂಪಾಗಿ ಸೇರಿದ ವಿದ್ಯಾರ್ಥಿಗಳೊಂದಿಗಿನ ಅವ್ಯಾಹತ ಚರ್ಚೆಗಳು – ಇವೆಲ್ಲವುಗಳಿಂದಾಗಿ, ಪಾರ್ಥನೊಳಗೆ ಮೊದಲೇ ಬಿಡುಗಡೆಗಾಗಿ ಕಾಯುತ್ತಿದ್ದ ಸಂಪ್ರದಾಯ ವಿರೋಧಿ ಭಾವನೆಗಳಿಗೆ ಬಾಗಿಲು ತೆರೆದಂತಾಗಿತ್ತು. ತರಗತಿಯಲ್ಲಿ ಕಲಿಯುವುದರಲ್ಲಿ ಮುಂದಿದ್ದರೂ, ಇತರ ಚಟುವಟಿಕೆಗಳಲ್ಲೇ ಅವನ ಆಸಕ್ತಿ ಜಾಸ್ತಿಯಾಗುತ್ತ ಹೋಯಿತು.

ಆ ದಿನಗಳಲ್ಲಿ ಅವನು ಭಾಷಣ ಮಾಡಲು ನಿಂತರೆ ಕೇಳುವವರ ಕೈಯ ರೋಮಗಳು ಸೆಟೆದು ನಿಲ್ಲುತ್ತಿದ್ದವು. ದೇಶದಲ್ಲಿ ನಡೆಯುವ ಅನ್ಯಾಯ, ರಾಜಕಾರಣಿಗಳ ಕುತಂತ್ರ, ಬಡವರ ಮೇಲಿನ ದಬ್ಬಾಳಿಕೆಗಳ ಬಗ್ಗೆ ಹೇಳುತ್ತ ಹೋದರಂತೂ ಅವನಿಗೆ ಮೈಮೇಲೆ ಬಂದಂತಾಗುತ್ತಿತ್ತು.

'ಇದಕ್ಕೆಲ್ಲ ಒಂದೇ ಮದ್ದು, ಹಳೆಯ ಸಂಪ್ರದಾಯಗಳ, ವಾಡಿಕೆಗಳ, ಪದ್ಧತಿಗಳ ಧ್ವಂಸವಾಗಿ, ಹೊಸ ಮನಸ್ಸು, ಹೊಸ ವಿಚಾರ, ಹೊಸ ಪ್ರಯತ್ನಗಳು ಮುನ್ನುಗ್ಗಬೇಕು,' ಎಂದು ಭಾಷಣದ ಉತ್ತರಾರ್ಧದಲ್ಲಿ ಘರ್ಜಿಸುತ್ತಿದ್ದ.

ಅವನ ಸುತ್ತಮುತ್ತ ಅವನ ಹಿಂಬಾಲಕರು ಸಾಕಷ್ಟು ಇರುತ್ತಿದ್ದರು. ತರಗತಿಯೊಳಗೆ ಇರುವುದಕ್ಕಿಂತ ಅವನು ಹೊರಗಿರುತ್ತಿದ್ದುದೇ ಹೆಚ್ಚು ಎಂಬ ಪ್ರತೀತಿಯಿತ್ತು. ಕಾಲೇಜಿನ ಶಿಕ್ಷಕರ ಮೇಲೆ, ಆಡಳಿತವರ್ಗದವರ ಬಗ್ಗೆ, ದೇಶದ ಪುಢಾರಿಗಳ ವಿರುದ್ಧ ಕಿಡಿಕಾರುತ್ತ, ಆವೇಶಭರಿತ ಮಾತುಗಳನ್ನು ಆಡುವಾಗ ಸಹಪಾಠಿಗಳು ಪ್ರಭಾವಿತರಾಗಿ ಕೇಳುತ್ತಿದ್ದರು. ಆಡಳಿತ ವರ್ಗದ ನಿರ್ಧಾರಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನ ಅಭಿಪ್ರಾಯವನ್ನು ಮಂಡಿಸುವ ಹಕ್ಕು ಇರಬೇಕೆಂಬುದು ಅವನ ಮೂಲ ಮಂತ್ರವಾಗಿತ್ತು. ಮುಂದೆ ಭವ್ಯ ಭಾರತವನ್ನು ಕಟ್ಟುವಲ್ಲಿ, ದೇಶದ ಸರಕಾರವು ಕೆಲವೇ ಬಲಿಷ್ಠ ಮಂದಿಯ ಕೈಯ್ಯಲ್ಲಿರದೆ, ಪ್ರತಿಯೊಬ್ಬ ರೈತ, ಪ್ರತಿಯೊಬ್ಬ ಸಾಮಾನ್ಯ ಕೂಲಿಯವನೂ ಭಾಗವಹಿಸುವ ದಿನ ಬರಬೇಕೆಂದು ಭಾಷಣ ಮಾಡುತ್ತ, ಲಂಚಗುಳಿತನ, ಭ್ರಷ್ಟಾಚಾರಗಳನ್ನು ಖಂಡಿಸುತ್ತ, ಉಳಿದವರನ್ನೂ ಪ್ರಚೋದಿಸುತ್ತಿದ್ದ. ಬೇರೆ ಕಾಲೇಜುಗಳಿಂದಲೂ ಅವನ ಭಾಷಣಕ್ಕಾಗಿ ಬೇಡಿಕೆಗಳು ಬರುತ್ತಿದ್ದವು. ಅದೇ ಸಮಯದಲ್ಲಿ ಅವನು ಕ್ರಾಂತಿಕಾರೀ ಕವನಗಳನ್ನೂ ಬರೆಯುತ್ತಿದ್ದ. ಹೀಗೆ ಪಾಠೇತರ ಚಟುವಟಿಕೆಗಳೇ ಹೆಚ್ಚಾಗಿ ಅವನು ಒಳ್ಳೆಯ ಅಂಕಗಳನ್ನು ಗಳಿಸುವುದು ಸಾಧ್ಯವಾಗುತ್ತಿರಲಿಲ್ಲ. ಉತ್ತೀರ್ಣನೇನೋ ಆಗುತ್ತಿದ್ದ.

ಅವನು ಕಾಲೇಜಿನಲ್ಲಿರುವಾಗಲೇ ಅವನ ತಂದೆ ಮೃತರಾಗಿದ್ದರು. ಅವರದು ಅಪಮೃತ್ಯು. ಹುಣಸೇಗುಡ್ಡೆಗೆ ಹೋದವರು ವಾಪಸ್ಸು ಬರುವಾಗ ಕತ್ತಲಾಗಿತ್ತಾಗಿ, ಬಸ್ಸು ಹಿಡಿಯುವ ಗಡಿಬಿಡಿಯಲ್ಲಿ ಬಸ್ಸಿನಡಿಗೆ ಬಿದ್ದು ಪ್ರಾಣ ಕಳಕೊಂಡಿದ್ದರು. ಬೆಳಗ್ಗೆ ಸುದ್ದಿ ತಿಳಿಯುವಾಗ ತಡವಾಗಿತ್ತು. ತಾಯಿ, ತಂಗಿ, ಇಬ್ಬರು ತಮ್ಮಂದಿರೊಂದಿಗೆ ಪಾರ್ಥನೂ ಒಮ್ಮೆಲೆ ಅನಾಥನಾಗಿ ಬಿಟ್ಟಿದ್ದ. ಆಗ ಕೊನೆಯ ವರ್ಷದಲ್ಲಿದ್ದ ಅವನನ್ನು ಇದ್ದಕ್ಕಿದ್ದಂತೆ ಯಥಾರ್ಥಕ್ಕೆ ಎಸೆಯಲ್ಪಟ್ಟಂತಾಗಿತ್ತು. ಅಷ್ಟು ಬೇಗ ತಂದೆಯನ್ನು ಕಳಕೊಳ್ಳುವ ಪ್ರಸಂಗ ಬರುತ್ತದೆನ್ನುವ ಕೂದಲೆಳೆಯಷ್ಟು ಸುಳಿವೂ ಅವನಿಗಿರಲಿಲ್ಲ. ರಾತ್ರಿ ಬೆಳಗಾಗುವುದರೊಳಗೆ ತಾಯಿ, ತಂಗಿ, ತಮ್ಮಂದಿರ ಜವಾಬ್ದಾರಿ ಹೊತ್ತ ಮನೆಯ ಯಜಮಾನನಾಗಿಬಿಟ್ಟಿದ್ದ.

ಊರಿನ ಜನರು ಏನೇನೋ ಮಾತನಾಡಿದರು. 'ಸುಬ್ರಾಯ ಮಾಸ್ಟ್ರಿಗ್ ಬದ್ಕ್ ಸಾಕಾಯಿತ್ತೆ, ಮೂಗಿನೊರೆಗ್ ಸಾಲ, ತೀರ್‌ಸೂಕಾಗ್ದೆ ಬಸ್ಸಿನಡಿ ಬಿದ್ ಪ್ರಾಣ ಕಳ್ಕಂಡದ್ದಂಬ್ರು,' ಎಂಬ ಸುದ್ದಿಯೂ ಹಬ್ಬಿತ್ತು. ತಂದೆಯ ಕಾರ್ಯಗಳೆಲ್ಲ ಮುಗಿದ ಕೂಡಲೇ ಪಾರ್ಥ ಬೆಂಗಳೂರಿಗೆ ಹೊರಟುಬಿಟ್ಟ. ಈ ಸಲ ಪರೀಕ್ಷೆ ಕಟ್ಟಬೇಕೇ ಬೇಡವೇ ಎಂದು ಯೋಚಿಸುತ್ತಿರುವಾಗ, ಅವನ ಅಮ್ಮನೇ, 'ಇಷ್ಟೊರ್ಸ ಕಲ್ತದ್ದಕ್ಕೆ ಈ ಸಲ ಪರೀಕ್ಷೆಗ್ ಕೂಕಣ್ಕೇ. ಅಪ್ಪಯ್ಯನ್ ಆತ್ಮಕ್ಕೂ ಶಾಂತಿ ಸಿಕ್ಕು' ಎಂದಿದ್ದಳು. ಪೆಟ್ಟಿಗೆ ಹೊತ್ತುಕೊಂಡು ಒಬ್ಬನೇ ಬಸ್ಸು ನಿಲ್ಲುವ ಜಾಗಕ್ಕೆ ಹೋಗುವಾಗ ತಮ್ಮಂದಿರು ಜೊತೆಯಲ್ಲಿ ಬರುತ್ತೇವೆಂದರೆ ಬೇಡವೇ ಬೇಡವೆಂದಿದ್ದ.

ಬಸ್ಸು ನಿಲ್ಲುವ ಹೆದ್ದಾರಿಯು ಮನೆಯಿಂದ ಹೆಚ್ಚು ದೂರದಲ್ಲಿರಲಿಲ್ಲವಾದರೂ, ಅಲ್ಲಿ ಹಾದು ಹೋಗುವ ಬಸ್ಸು-ಲಾರಿಗಳ ಪೈಪೋಟಿಯ ವೇಗಕ್ಕೆ